**ಕರ್ನಾಟಕ ವಿಧಾನಸಭೆ**
**ಹದಿನಾರನೇ ವಿಧಾನಸಭೆ**
**ನಾಲ್ಕನೇ ಅಧಿವೇಶನ**

# ಕರ್ನಾಟಕ ಸರ್ಕಾರಿ ಉದ್ಯಾನವನಗಳ(ಸಂರಕ್ಷಣೆ) (ತಿದ್ದುಪಡಿ) ವಿಧೇಯಕ, 2024

**(2024ರ ವಿಧಾನಸಭೆಯ ವಿಧೇಯಕ ಸಂಖ್ಯೆ–40)**

ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ) ಅಧಿನಿಯಮ, 1975ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಸರ್ಕಾರಿ ಉದ್ಯಾನವನಗಳ(ಸಂರಕ್ಷಣೆ) ಅಧಿನಿಯಮ, 1975ನ್ನು (1975ರ ಕರ್ನಾಟಕ ಅಧಿನಿಯಮ 23) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೈದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ) (ತಿದ್ದುಪಡಿ) ಅಧಿನಿಯಮ, 2024 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 5ನೇ ಪ್ರಕರಣದ ತಿದ್ದುಪಡಿ.-** ಕರ್ನಾಟಕ ಸರ್ಕಾರಿ ಉದ್ಯಾನವನಗಳ(ಸಂರಕ್ಷಣೆ) ಅಧಿನಿಯಮ, 1975ರ (1975ರ ಕರ್ನಾಟಕ ಅಧಿನಿಯಮ 23) 5ನೇ ಪ್ರಕರಣದ, (ಎಫ್) ಖಂಡದ ತರುವಾಯ ಸೇರಿಸತಕ್ಕದ್ದು, ಎಂದರೆ:-

"(ಜಿ) ಮೂವತ್ತು ವರ್ಷಗಳ ಅವಧಿಗಾಗಿ ಸಾರ್ವಜನಿಕ ಖಾಸಗಿ ಸಹಭಾಗಿತ್ವದ ಮಾದರಿಯಲ್ಲಿ ನಂದಿ ಬೆಟ್ಟಗಳಲ್ಲಿನ ರೋಪ್‌ವೇ ಯೋಜನೆಯಡಿಯಲ್ಲಿ ಮೇಲು ಮಾರ್ಗಾಂತ್ಯ ಸ್ಥಳ (ಯುಟಿಪಿ) ಉದ್ದೇಶಕ್ಕಾಗಿ ನಂದಿ ಬೆಟ್ಟದಲ್ಲಿನ ಸರ್ವೆ ನಂ.3ರಲ್ಲಿನ ಎರಡು ಎಕರೆ ಭೂಮಿ." ಅದರ ಚಕ್ಕುಬಂದಿ ಈ ಕೆಳಗಿನಂತಿದೆ,-

ಉತ್ತರ – ವಾಹನ ನಿಲುಗಡೆ ಪ್ರದೇಶ
ದಕ್ಷಿಣ – ಅರ್ಕಾವತಿ ನದಿಯ ಉಗಮ ಸ್ಥಳದ ಪಕ್ಕದಲ್ಲಿರುವ ಬೆಟ್ಟದ ಇಳಿಜಾರು
ಪೂರ್ವ – ಎರಡನೇ ಕೋಟೆ ಗೋಡೆ
ಪಶ್ಚಿಮ – ಮೊದಲನೇ ಕೋಟೆ ಗೋಡೆ

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಮೂವತ್ತು ವರ್ಷಗಳ ಅವಧಿಗಾಗಿ ಸಾರ್ವಜನಿಕ ಖಾಸಗಿ ಸಹಭಾಗಿತ್ವದ ಮಾದರಿಯಲ್ಲಿ ನಂದಿ ಬೆಟ್ಟಗಳಲ್ಲಿನ ರೋಪ್‌ವೇ ಯೋಜನೆಯಡಿಯಲ್ಲಿ ಮೇಲು ಮಾರ್ಗಾಂತ್ಯ ಸ್ಥಳದ (ಯುಟಿಪಿ) ಅಭಿವೃದ್ಧಿಯ ಉದ್ದೇಶಕ್ಕಾಗಿ ಎರಡು ಎಕರೆ ಭೂಮಿಯನ್ನು ಒದಗಿಸುವುದಕ್ಕೆ ಉಪಬಂದ ಕಲ್ಪಿಸಲು ಕರ್ನಾಟಕ ಸರ್ಕಾರಿ ಉದ್ಯಾನವನಗಳ(ಸಂರಕ್ಷಣೆ) ಅಧಿನಿಯಮ, 1975ನ್ನು (1975ರ ಕರ್ನಾಟಕ ಅಧಿನಿಯಮ 23) ಮತ್ತಷ್ಟು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಎಸ್. ಎಸ್. ಮಲ್ಲಿಕಾರ್ಜುನ**
ಗಣಿ , ಭೂವಿಜ್ಞಾನ
ಮತ್ತು ತೋಟಗಾರಿಕೆ ಮಂತ್ರಿ

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

## ಅನುಬಂಧ

## ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ) ಅಧಿನಿಯಮ, 1975

## (1975ರ ಕರ್ನಾಟಕ ಅಧಿನಿಯಮ ಸಂಖ್ಯೆ 23)

## ಉದೃತ ಭಾಗ

**5. ಕೆಲವೊಂದು ಪ್ರಕರಣಗಳಲ್ಲಿ ಅನುಮತಿ.-** 4ನೇ ಪ್ರಕರಣದಲ್ಲಿ ಏನೇ ಇದ್ದರೂ, ರಾಜ್ಯ ಸರ್ಕಾರವು ನಿರ್ಮಾಣ, ನಿರ್ವಹಣೆ, ವ್ಯವಸ್ಥಾಪನೆ, ಬಳಕೆ ಮತ್ತು ಅಂತಹುದೇ ಇತರ ಉದ್ದೇಶಗಳ ಸಂಬಂಧದಲ್ಲಿ ತಾನು ವಿಧಿಸಬಹುದಾದಂಥ ಷರತ್ತುಗಳು ಮತ್ತು ನಿಬಂಧನೆಗಳಿಗೆ ಒಳಪಟ್ಟು,-

**(ಎಫ್)** ರಿಪೇರಿಗಳು ಮತ್ತು ಇತರ ಅಭಿವೃದ್ಧಿ ಇತರ ಅಭಿವೃದ್ಧಿ ಕಾಮಗಾರಿಗಳ ಉದ್ದೇಶಗಳಿಗಾಗಿ, ಈ ಕೆಳಗೆ ನಿರ್ದಿಷ್ಟಪಡಿಸಿದ ಸರಹದ್ದುಗಳೊಂದಿಗೆ ವಿಧಾನಸೌಧ, ವಿಕಾಸಸೌಧ ಮತ್ತು ಇತರ ನಿರ್ಮಿತಿಗಳ ಕಟ್ಟಡಗಳನ್ನು ಒಳಗೊಂಡ 49 ಎಕರೆಗಳು ಮತ್ತು 34 ಗುಂಟೆಗಳು (ಅಂದಾಜು),-

ಉತ್ತರ: ಶಾಸಕರ ಭವನ ವೃತ್ತದಿಂದ ಪ್ರಾರಂಭವಾಗಿ ರಸ್ತೆ ಉದ್ದಕ್ಕೂ ಮತ್ತು ವಾಹನ ನಿಲುಗಡೆ ಬಾಗಿಲಿನವರೆಗೆ ಕೊನೆಗೊಳ್ಳುವುದು.

ದಕ್ಷಿಣ: ಲೋಕಾಯುಕ್ತ ಕಚೇರಿಯಿಂದ ಪ್ರಾರಂಭವಾಗಿ ಗೋಪಾಲಗೌಡ ವೃತ್ತದಿಂದ ಪೊಲೀಸು ತಿಮ್ಮಯ್ಯ ವೃತ್ತವನ್ನು ಮುಟ್ಟುವ ವಿಧಾನವೀದಿ ರಸ್ತೆ.

ಪೂರ್ವ: ಶಾಸಕರ ಭವನ ವೃತ್ತದಿಂದ ಪ್ರಾರಂಭವಾಗಿ ರಾಜಭವನ ಗೋಡೆಯ ಸರಹದ್ದಿನುದ್ದಕ್ಕೂ ಮತ್ತು ಪೊಲೀಸು ತಿಮ್ಮಯ್ಯ ವೃತ್ತವನ್ನು ಮುಟ್ಟುವುದು.

ಪಶ್ಚಿಮ: ಲೋಕಾಯುಕ್ತ ಕಚೇರಿಯಿಂದ ಪ್ರಾರಂಭವಾಗಿ ಬಹುಮಹಡಿ ಕಟ್ಟಡದ ಗೋಡೆಯುದ್ದಕ್ಕೂ ಮತ್ತು ವಾಹನ ನಿಲುಗಡೆ ಬಾಗಿಲಿನಲ್ಲಿ ಕೊನೆಗೊಳ್ಳುವುದು][1]

**XXX XXX XXX**

ಸರ್ಕಾರಿ ಮುದ್ರಣಾಲಯ, ವಿಕಾಸಸೌಧ, ಬೆಂಗಳೂರು, ಪಿ7, ಕಾಸೂ , ಪ್ರತಿಗಳು 500, 23ನೇ ಜುಲೈ 2024

**KARNATAKA LEGISLATIVE ASSEMBLY**
**SIXTEENTH LEGISLATIVE ASSEMBLY**
**FOURTH SESSION**

# THE KARNATAKA GOVERNMENT PARKS (PRESERVATION) (AMENDMENT) BILL, 2024

**(LA Bill No. 40 of 2024)**

A Bill, further to amend the Karnataka Government Parks (Preservation) Act, 1975.

Whereas, it is expedient further to amend the Karnataka Government Parks (Preservation) Act, 1975 (Karnataka Act 23 of 1975), for the purposes hereinafter appearing;

Be it enacted by the Karnataka State Legislature in the Seventy fifth year of the Republic of India, as follows:-

**1. Short title and commencement.-** (1) This Act may be called the Karnataka Government Parks (Preservation) (Amendment) Act, 2024.

(2) It shall come into force at once.

**2. Amendment of section 5.-** In the Karnataka Government Parks (Preservation) Act, 1975 (Karnataka Act 23 of 1975) in section 5, after clause (f), the following shall be inserted namely:-

"(g) two acres of land in survey no.3 at Nandi Hills for the purpose of Upper Terminal Point (UTP) under Nandi Hills Ropeway Project on Public Private Partnership model for a period of thirty years. The boundary details as below,-

North - Vehicle Parking Area

South - Hill slope adjacent to Arkavathi river birth place

East - Second for wall

West - First fort wall

## STATEMENT OF OBJECTS AND REASONS

It is considered necessary further to amend the Karnataka Government Parks (Preservation) Act, 1975 (Karnataka Act 23 of 1975) to make a provision for provide two acres of land for the purpose of development of Upper Terminal Point (UTP) under Nandi Hills Ropeway project on public private partnership model for a period of thirty years.

Hence, the Bill.

## FINANCIAL MEMORANDUM

There is no extra expenditure involved in the proposed legislative measure.

**S. S. Mallikarjun**
Minister for Mines, Geology and
Horticulture

**M.K. VISHALAKSHI**
Secretary
Karnataka Legislative Assembly

**ANNEXURE**

**EXTRACT FROM THE KARNATAKA GOVERNMENT PARKS (PRESERVATION) ACT, 1975 (KARNATAKA ACT 23 OF 1975)**

XXX XXX XXX

5. Permission in certain cases.-Notwithstanding anything contained in section 4, the State Government may subject to such conditions and restrictions as it may impose as regards construction, maintenance, management use and like matters alienate an area of,-

f) 49 acres and 34 guntas (approximately) consisting of the buildings of Vidhana Soudha, Vikasa Soudha and other structures with the boundaries specified hereunder for the purposes of repairs and other developmental works,-

North: Starting from Legislature House circle, running along the road and ending upto car parking gate.

South: Vidhana Veedhi road starting from Lokayuktha office running along Gopala Gowda circle touching Police Timmaiah circle.

East: Starting from Legislature circle, running along boundary wall of Rajbhavan and touching Police Timmaiah circle.

West: Starting from Lokayukta office running along M.S. Building compound and ending at Parking gate.

XXX XXX XXX

Govt. Press, Vikasa Soudha, Bengaluru, 23rd July, 2024, P7, W.D., Copies 500